ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**2175**
ಮಾನ್ಯ ಸದಸ್ಯರ ಹೆಸರು	ಶ್ರೀ ಎಂ ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	ಮಾನ್ಯ ಅಬಕಾರಿ ಸಚಿವರು
ಉತ್ತರಿಸಬೇಕಾದವರು	25-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯಾದ್ಯಂತ ಅಬಕಾರಿ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು)	ರಾಜ್ಯಾದ್ಯಂತ ಅಬಕಾರಿ ಇಲಾಖೆಯ ವಿವಿಧ ವೃಂದಗಳಲ್ಲಿ ಒಟ್ಟು 1729 ಹುದ್ದೆಗಳು ಖಾಲಿಯಿವೆ. ವಿವರಗಳು **ಅನುಬಂಧ-1**ರಲ್ಲಿ ನೀಡಲಾಗಿದೆ.
ಆ)	ಅಬಕಾರಿ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿಂದ ಎದುರಾಗಿರುವ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;	ಖಾಲಿ ಇರುವ ಹುದ್ದೆಗಳಿಗೆ ನೇರ ನೇಮಕಾತಿ ಹಾಗೂ ಮುಂಬಡ್ತಿ ಮೂಲಕ ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ.
ಇ)	ಅಬಕಾರಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ವೃಂದದ ಅಧಿಕಾರಿಗಳ ವಿರುದ್ಧ ಎಷ್ಟು ಶಿಸ್ತಿನ ಪ್ರಕರಣಗಳು ಬಾಕಿ ಇವೆ; ಎಷ್ಟು ಪ್ರಕರಣಗಳಲ್ಲಿ ಅಧಿಕಾರಿಗಳಿಗೆ ದಂಡನೆ ವಿಧಿಸಲಾಗಿದೆ ಹಾಗೂ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಅಬಕಾರಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ವೃಂದದ ಅಧಿಕಾರಿಗಳ ವಿರುದ್ಧ ಒಟ್ಟು 34 ಶಿಸ್ತಿನ ಪ್ರಕರಣಗಳು ಬಾಕಿಯಿದ್ದು, ಮಾಹಿತಿಯನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. ಕಳೆದ 05 ವರ್ಷಗಳ ಅವಧಿಯಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಿ ಒಟ್ಟು 07 ಪ್ರಕರಣಗಳಲ್ಲಿ ದಂಡನೆ ವಿಧಿಸಲಾಗಿದ್ದು, ಮಾಹಿತಿಯನ್ನು **ಅನುಬಂಧ-3**ರಲ್ಲಿ ನೀಡಲಾಗಿದೆ.

ಈ)	ಸದರಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಶ್ರೇಣಿಯ ಅಧಿಕಾರಿಗಳು/ ನೌಕರರು ಸರ್ಕಾರ ಸೇವೆಗೆ ಸೇರಿದ ದಿನದಿಂದ ಇದುವರೆಗೆ ಪ್ರತಿ ವರ್ಷವೂ ಸಲ್ಲಿಸಬೇಕಾಗಿರುವ ಆಸ್ತಿ ಮತ್ತು ಋಣ ವಿವರಗಳನ್ನು ಇಲಾಖೆ ಹಾಗೂ ಸರ್ಕಾರಕ್ಕೆ ಸಲ್ಲಿಸಿದ್ದಾರೆಯೇ; ಹಾಗೆ ಸಲ್ಲಿಸದೇ ಇರುವ ಪ್ರಕರಣವೆಷ್ಟು ಹಾಗೂ ಅಂತಹವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಕಾರ್ಯನಿರ್ವಹಿಸುತ್ತಿರುವ ವಿವಿಧ ಶ್ರೇಣಿಯ ಅಧಿಕಾರಿಗಳು / ನೌಕರರು ಸರ್ಕಾರಿ ಸೇವೆಗೆ ಸೇರಿದ ದಿನಾಂಕದಿಂದ ಆಸ್ತಿ ಮತ್ತು ಋಣಪಟ್ಟಿಗಳನ್ನು ಸಲ್ಲಿಸುತ್ತಿದ್ದು, ಸಲ್ಲಿಸದಿರುವ ಅಧಿಕಾರಿ / ನೌಕರರುಗಳಿಗೆ ಜ್ಞಾಪನಗಳನ್ನು ನೀಡಲಾಗುತ್ತಿದೆ.

ಆಇ 55 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

ಅನುಬಂಧ-1

ಕ್ರಸಂ	ಪದನಾಮ	ಖಾಲಿ ಹುದ್ದೆ
1.	ಅಬಕಾರಿ ಆಯುಕ್ತರು (ಭಾ.ಆ.ಸೇ)	0
2.	ಹೆಚ್ಚುವರಿ ಅಬಕಾರಿ ಆಯುಕ್ತರು (ಭಾ.ಆ.ಸೇ) (ಕೇಂದ್ರಸ್ಥಾನ ಮತ್ತು ಆಡಳಿತ)	0
3.	ಅಬಕಾರಿ ಅಪರ ಆಯುಕ್ತರು (ಭಾ.ಆ.ಸೇ/ಕ.ಆ.ಸೇ)	0
4.	ಹೆಚ್ಚುವರಿ ಅಬಕಾರಿ ಆಯುಕ್ತರು	0
5.	ಅಬಕಾರಿ ಜಂಟಿ ಆಯುಕ್ತರು	6
6.	ಅಬಕಾರಿ ಜಂಟಿ/ಉಪ ಆಯುಕ್ತರು (ಆಡಳಿತ)	1
7.	ಅಬಕಾರಿ ಉಪ ಆಯುಕ್ತರು	2
8.	ಜಂಟಿ/ಉಪ ನಿರ್ದೇಶಕರು (ಸಾಂಖ್ಯಿಕ)	0
9.	ಹಿರಿಯ ಲೆಕ್ಕಾಧಿಕಾರಿಗಳು	0
10.	ಹಿರಿಯ ಆಂತರಿಕ ಪರಿಶೋಧಕರು	0
11.	ಅಬಕಾರಿ ಅಧೀಕ್ಷಕರು	50
12.	ಮುಖ್ಯ ರಾಸಾಯನಿಕ ತಜ್ಞರು	0
	ಗ್ರೂಪ್-ಎ ಒಟ್ಟು	**59**
13.	ಸಹಾಯಕ ನಿರ್ದೇಶಕರು(ಸಾಂಖ್ಯಿಕ)	0
14.	ಅಬಕಾರಿ ಉಪ ಅಧೀಕ್ಷಕರು	36
15.	ಹಿರಿಯ ರಾಸಾಯನಿಕ ತಜ್ಞರು	1
16.	ಸಹಾಯಕ ಲೆಕ್ಕಾಧಿಕಾರಿಗಳು	2
	ಗ್ರೂಪ್-ಬಿ ಒಟ್ಟು	**39**
17.	ಕಿರಿಯ ರಾಸಾಯನಿಕ ತಜ್ಞರು	2
18.	ಪ್ರಯೋಗಾಲಯ ಸಹಾಯಕರು	2
19.	ಕಛೇರಿ ಅಧೀಕ್ಷಕರು	2
20.	ಅಬಕಾರಿ ನಿರೀಕ್ಷಕರು	67
21.	ಅಬಕಾರಿ ಉಪ ನಿರೀಕ್ಷಕರು	311
22.	ಪ್ರಥಮ ದರ್ಜೆ ಸಹಾಯಕರು	128
23.	ಶೀಘ್ರಲಿಪಿಗಾರರು	34
24.	ದ್ವಿತೀಯ ದರ್ಜೆ ಸಹಾಯಕರು	129
25.	ಬೆರಳಚ್ಚುಗಾರರು	45
26.	ಹಿರಿಯ ಅಬಕಾರಿ ರಕ್ಷಕರು	139
27.	ಅಬಕಾರಿ ರಕ್ಷಕರು	572
28.	ಹಿರಿಯ ವಾಹನ ಚಾಲಕರು	14
29.	ವಾಹನ ಚಾಲಕರು	149
	ಗ್ರೂಪ್-ಸಿ ಒಟ್ಟು	**1594**
30.	ಗ್ರೂಪ್ ಡಿ ನೌಕರರು	37
	ಗ್ರೂಪ್-ಡಿ ಒಟ್ಟು	**37**
	ಒಟ್ಟು	**1729**

ಆಇ 55 ಇಎಲ್‌ಕ್ಯೂ 2021

ಅನುಬಂಧ-2

ಖಾಲಿ ಹುದ್ದೆಗಳ ವಿವರ ಹಾಗೂ ಸದರಿ ಹುದ್ದೆಗಳನ್ನು ತುಂಬಲು ಕೈಗೊಂಡಿರುವ ಕ್ರಮದ ವಿವರ:-

ಕ್ರಸಂ	ಹುದ್ದೆಯ ಹೆಸರು	ಹುದ್ದೆ ಭರ್ತಿಗೆ ಕೈಗೊಂಡ ಕ್ರಮದ ವಿವರ
1.	ಅಬಕಾರಿ ಜಂಟಿ ಆಯುಕ್ತರು	ಪದೋನ್ನತಿಗೆ ನಿಗದಿತ ಅರ್ಹತಾದಾಯಕ ಸೇವೆಯನ್ನು ಪೂರೈಸಿರುವ ಅರ್ಹ ಅಧಿಕಾರಿಗಳು ಲಭ್ಯವಿರುವುದಿಲ್ಲ.
2.	ಅಬಕಾರಿ ಉಪ ಆಯುಕ್ತರು	ಪದೋನ್ನತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿರುತ್ತದೆ.
3.	ಅಬಕಾರಿ ಅಧೀಕ್ಷಕರು	ಪದೋನ್ನತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.
4.	ಅಬಕಾರಿ ಉಪ ಅಧೀಕ್ಷಕರು	ಪದೋನ್ನತಿ ಕೋಟಾದಡಿ 13 ಹುದ್ದೆಗಳು ಖಾಲಿ ಇದ್ದು, ಪದೋನ್ನತಿ ನೀಡಲು ಕ್ರಮವಹಿಸಲಾಗಿರುತ್ತದೆ. ನೇರ ನೇಮಕಾತಿ ಕೋಟಾದಡಿ ಒಟ್ಟು 23 ಹುದ್ದೆಗಳು ಖಾಲಿ ಇದ್ದು, ಈ ಕೆಳಕಂಡಂತೆ ಕ್ರಮವಹಿಸಲಾಗಿರುತ್ತದೆ. 2011 ನೇ ಸಾಲಿನ 6 ಹುದ್ದೆಗಳು ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಬಾಕಿ ಇರುತ್ತದೆ. 2017-18 ನೇ ಸಾಲಿನಲ್ಲಿ 5 ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಕೆಪಿಎಸ್ ಸಿಯು ಅಧಿಸೂಚನೆ ಹೊರಡಿಸಿರುತ್ತದೆ. ಉಳಿದ 12 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ 22-01-2021 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.
5.	ಅಬಕಾರಿ ನಿರೀಕ್ಷಕರು	ಪದೋನ್ನತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿರುತ್ತದೆ.
6.	ಕಛೇರಿ ಅಧೀಕ್ಷಕರು	ಪದೋನ್ನತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿರುತ್ತದೆ.
7.	ಅಬಕಾರಿ ಉಪ ನಿರೀಕ್ಷಕರು	ಖಾಲಿ ಇರುವ ಹುದ್ದೆಗಳಲ್ಲಿ 227 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಕೆಪಿಎಸ್‌ಸಿ ಯಿಂದ ಭರ್ತಿ ಮಾಡಲು ಕ್ರಮವಹಿಸಲಾಗಿರುತ್ತದೆ. ಉಳಿದ ಹುದ್ದೆಗಳನ್ನು ನೇರನೇಮಕಾತಿ/ಪದೋನ್ನತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಬೇಕಾಗಿರುತ್ತದೆ.
8.	ಪ್ರಥಮ ದರ್ಜೆ ಸಹಾಯಕರು	ಖಾಲಿ ಇರುವ ಹುದ್ದೆಗಳಲ್ಲಿ 31 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಕೆಪಿಎಸ್‌ಸಿ ಯಿಂದ ಭರ್ತಿ ಮಾಡಲು ಕ್ರಮವಹಿಸಲಾಗಿರುತ್ತದೆ. ಪದೋನ್ನತಿ ಕೋಟಾದಡಿ ಖಾಲಿ ಇರುವ ಹುದ್ದೆಗಳನ್ನು ಪದೋನ್ನತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿರುತ್ತದೆ.
9.	ಶೀಘ್ರಲಿಪಿಗಾರರು	ಸರ್ಕಾರವು ಖಾಲಿ ಇರುವ ಹುದ್ದೆಗಳಿಗೆ ಹೊರಗುತ್ತಿಗೆ ಮೇಲೆ ಪಡೆಯಲು ಸೂಚಿಸಿರುತ್ತದೆ
10.	ದ್ವಿತೀಯ ದರ್ಜೆ ಸಹಾಯಕರು	ನೇರ ನೇಮಕಾತಿ ಖೋಟಾದಡಿ 47 ಹುದ್ದೆಗಳು ಖಾಲಿ ಇರುತ್ತದೆ. ಸದರಿ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಭರ್ತಿ ಮಾಡಲಾಗುತ್ತದೆ. ಹಾಗೂ ಪದೋನ್ನತಿ ಖೋಟಾದಡಿ 82 ಹುದ್ದೆಗಳನ್ನು ಅರ್ಹ ನೌಕರರುಗಳಿಂದ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.
11.	ಬೆರಳಚ್ಚುಗಾರರು	ಉಳಿದ ಖಾಲಿ ಇರುವ ಹುದ್ದೆಗಳಿಗೆ ಸರ್ಕಾರವು ಹೊರಗುತ್ತಿಗೆ ಮೇಲೆ ಪಡೆಯಲು ಸೂಚಿಸಿರುತ್ತದೆ

12.	ಅಬಕಾರಿ ಹಿರಿಯ ರಕ್ಷಕರು	ಪದೋನ್ನತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿರುತ್ತದೆ.
13.	ಅಬಕಾರಿ ರಕ್ಷಕರು	ಖಾಲಿ ಹುದ್ದೆಗಳಿಗೆ ಈಗಾಗಲೇ ಆರ್ಥಿಕ ಇಲಾಖೆಯ ಸಹಮತಿ ಪಡೆದು 1003 ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಕೆಪಿಎಸ್‌ಸಿ ಯು ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದು, ಅದರಂತೆ ಒಟ್ಟು 826 ಹುದ್ದೆಗಳಿಗೆ ಈಗಾಗಲೇ ನೇಮಕಾತಿ ಆದೇಶ ಹೊರಡಿಸಿದ್ದು, ಉಳಿದ ಹುದ್ದೆಗಳಿಗೆ ನೇಮಕಾತಿ ಮಾಡುವ ಸಂಬಂಧ ಜಿಲ್ಲಾ ಹಂತದಲ್ಲಿ ದಾಖಲಾತಿಗಳ ಪರಿಶೀಲನಾ ಹಂತದಲ್ಲಿರುತ್ತದೆ.
14.	ವಾಹನ ಚಾಲಕರು	ಖಾಲಿ ಇರುವ ಹುದ್ದೆಗಳಲ್ಲಿ 77 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಜಿಲ್ಲಾ ಮಟ್ಟದಲ್ಲಿ ಭರ್ತಿ ಮಾಡಲು ಕ್ರಮ ವಹಿಸಲಾಗಿರುತ್ತದೆ. ಉಳಿದ ಹುದ್ದೆಗಳನ್ನು ನೇರ ನೇಮಕಾತಿ ಪದೋನ್ನತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಬೇಕಾಗಿರುತ್ತದೆ.
15.	ಗ್ರೂಪ್–ಡಿ	ಖಾಲಿ ಇರುವ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ.

ಆಇ 55 ಇಎಲ್‌ಕ್ಯೂ 2021

ಅನುಬಂಧ-3

ಕ್ರ. ಸಂ.	ಕಡತ ಸಂಖ್ಯೆ	ಅಧಿಕಾರಿ / ನೌಕರರ ಹೆಸರು ಪದನಾಮ ಶ್ರೀಯುತ/ಶ್ರೀಮತಿ	ವಿಷಯ
1.	ಇಸಿಇ/07/ಡಿಎಸ್‌ಸಿ(2)/ಹೊಸಪೇಟೆ ವಿಭಾಗ/ 2019	ಶ್ರೀ ಎಲ್.ಎಸ್. ಮೋಹನ್ ಕುಮಾರ್, ಅಬಕಾರಿ ಜಂಟಿ ಆಯುಕ್ತರು, (ಜಾರಿ ಮತ್ತು ತನಿಖೆ) ಹೊಸಪೇಟೆ ವಿಭಾಗ	ಬಳ್ಳಾರಿ ಪೋಲೀಸ್ ಠಾಣೆ ಇಲ್ಲಿ ದಾಖಲಾದ ಪ್ರಕರಣ ಸಂಖ್ಯೆ: 16/2019, ದಿನಾಂಕ: 20.07.2019 ಎ.ಸಿ.ಬಿ ದಾಳಿ ಪ್ರಕರಣ ಕುರಿತು- ಸರ್ಕಾರದ ಆದೇಶ ಸಂಖ್ಯೆ: ಆಇ/62/ಇಪಿಎಸ್/2019, ದಿನಾಂಕ: 31.08.2019ರನ್ವಯ ಸದರಿಯವರನ್ನು ಅಮಾನತ್ತುಗೊಳಿಸಿ ಆದೇಶಿಸಿರುತ್ತದೆ. ಸದರಿ ಆದೇಶಕ್ಕೆ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 10815/2019 ದಿನಾಂಕ: 24.09.2019ರ ಮದ್ಯಂತರ ಆದೇಶದಲ್ಲಿ ಅಮಾನತ್ತು ಆದೇಶಕ್ಕೆ ತಡೆಯಾಜ್ಞೆಯನ್ನು ನೀಡಿರುತ್ತದೆ.
2.	ಇಸಿಇ/ಎಂವೈಎಸ್/03/ಡಿಎಸ್‌ಸಿ(1)/ 2008	ಶ್ರೀ ಎಸ್.ಕೆ.ಕುಮಾರ್, ಅಬಕಾರಿ ಉಪ ಆಯುಕ್ತರು, ಮಂಡ್ಯ ಜಿಲ್ಲೆ	ಶ್ರೀ ಎಸ್. ಕೆ. ಕುಮಾರ್, ಅಬಕಾರಿ ಉಪ ಆಯುಕ್ತರು (ಹಾಲಿ ಅಬಕಾರಿ ಜಂಟಿ ಆಯುಕ್ತರು) ಮಾನ್ಯ ಕರ್ನಾಟಕ ಲೋಕಾಯುಕ್ತ, ಮಂಡ್ಯ ಇವರು ದಾಖಲಿಸಿರುವ ಮೊಕದ್ದಮೆ ಸಂಖ್ಯೆ: 01/2010, ದಿನಾಂಕ: 15.01.2010 ದಾಖಲಾಗಿರು ಕುರಿತು. (ಲೋಕಾಯುಕ್ತ ಪ್ರಕರಣ).
3.	ಇಸಿಇ/ಎಂವೈಎಸ್/01/ ಡಿಎಸ್‌ಸಿ(3)/2012	ಡಾ: ವೈ.ಮಂಜುನಾಥ್ ಅಬಕಾರಿ ಉಪ ಆಯುಕ್ತರು, ಮೈಸೂರು ಜಿಲ್ಲೆ ಹಾಗೂ ಗ್ರೂಪ್ ಸಿ ಸಿಬ್ಬಂದಿ. ಶ್ರೀ ಕೆ.ಎಂ ತಮ್ಮಣ್ಣ, ಅಬಕಾರಿ ನಿರೀಕ್ಷಕರು, ಹಾಲಿ ಅಬಕಾರಿ ಉಪ ಅಧೀಕ್ಷಕರು, ವಲಯ-1.	ದಿನಾಂಕ: 27.06.2012 ರಂದು ಮೈಸೂರು ಜಿಲ್ಲೆ ಅಬಕಾರಿ ಉಪ ಆಯುಕ್ತರ ಕಛೇರಿ ಹಾಗೂ ವಲಯ ಕಛೇರಿಗಳ ಮೇಲೆ ಮೈಸೂರು ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿರುವ ಬಗ್ಗೆ- ಲಂಚ ನಿರೋಧ ಕಾಯ್ದೆ 1988ರ ಕಲಂ 13 (1) (ಡಿ) ರೆ/ವಿ. 13(2) ರಡಿಯಲ್ಲಿ ಲಂಚ ಸ್ವೀಕಾರ ಆರೋಪದ ಮೇಲೆ ಮೊಕದ್ದಮೆ ಸಂಖ್ಯೆ: 11/2012 ಹಾಗೂ 12/2012 ದಾಖಲಾಗಿರುತ್ತದೆ.

4.	ಇಸಿಇ/13/ಡಿಎಸ್ ಸಿ/03/ಗುಲ್ಬರ್ಗಾ ವಿಭಾಗ/2015.	ಶ್ರೀ ಗೋಪಾಲ ಪಂಡಿತ್ ಪ್ರಭಾರ ಅಬಕಾರಿ ಉಪ ಅಧೀಕ್ಷಕರು.	ನಿಯಮ ಬಾಹಿರವಾಗಿ ಸಿಎಲ್-4 ಸನ್ನದು ಮಂಜೂರಾತಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುವ ಬಗ್ಗೆ. ಮಾನ್ಯ ಲೋಕಾಯುಕ್ತರು ಸಲ್ಲಿಸಿರುವ ವರದಿಯ ಬಗ್ಗೆ ಪರಿಶೀಲಿಸಿ ಮಾಹಿತಿ ಹಾಗೂ ಪೂರಕ ದಾಖಲಾತಿಗಳೊಂದಿಗೆ ವರದಿ ಸಲ್ಲಿಸಲು ಅಬಕಾರಿ ಉಪ ಆಯುಕ್ತರು, ಕಲಬುರಗಿ ಜಿಲ್ಲೆ ರವರಿಗೆ ದಿ: 05-02-2021 ರಂದು ವರದಿ ಸಲ್ಲಿಸಲಾಗಿದೆ.
5	ಇಸಿಇ/02/ಎಂವೈಎಸ್/ ಡಿಎಸ್‌ಸಿ(2)/ 2016	ಶ್ರೀ ಗಂಗಾಧರ್ ಹೆಚ್. ಮುದ್ದೆಣ್ಣವರ್, ಅಬಕಾರಿ ಉಪ ಅಧೀಕ್ಷಕರು. ಹುಣಸೂರು ಉಪ ವಿಭಾಗ, ಮೈಸೂರು ಜಿಲ್ಲೆ.	ಗ್ರಾಮಸ್ಥರು ಬಾವಲಿ ಗ್ರಾಮ ಮತ್ತು ಸಂಘ ಸಂಸ್ಥೆ, ಡಿ.ಬಿ.ಕುಪ್ಪೆ ಗ್ರಾಮ ಪಂಚಾಯಿತಿ ಅಂತರ ಸಂತೆ ಹೋಬಳಿ ಹೆಚ್.ಡಿ.ಕೋಟೆ ತಾಲ್ಲೂಕು ಇವರುಗಳು ಸಲ್ಲಿಸಿರುವ ದೂರು ಅರ್ಜಿಯನ್ನು ನಿಯಮಾನುಸಾರ ಪರಿಶೀಲಿಸದೇ ಸಿಎಲ್-7 ಸನ್ನದನ್ನು ನವೀಕರಿಸಲು ಶಿಫಾರಸ್ಸು ಮಾಡಿರುವುದು.
6.	ಇಸಿಇ/02/ ಹೊಸಪೇ/ ಡಿಎಸ್‌ಸಿ (2)/2014	1. ಶ್ರೀ ಮಲ್ಲಿಕಾರ್ಜುನ ರೆಡ್ಡಿ, ಅಬಕಾರಿ ನಿರೀಕ್ಷಕರು, ಗದಗ ಉಪ ವಿಭಾಗ 2. ಶ್ರೀಮತಿ ಆಶಾಲತಾ, ಅಬಕಾರಿ ಉಪ ಅಧೀಕ್ಷಕರು, ಗದಗ ಉಪ ವಿಭಾಗ.	ಸನ್ನದು ಷರತ್ತು ಹಾಗೂ ನಿಬಂಧನೆಗಳನ್ನು ಪರಿಶೀಲಿಸದೆ ಮೇಲಧಿಕಾರಿಗಳಿಗೆ ಸನ್ನದು ಮಂಜೂರಾತಿಗಾಗಿ ಶಿಫಾರಸ್ಸು ಮಾಡಿರುವ ಕುರಿತಂತೆ ಲೋಕಾಯುಕ್ತರಿಗೆ ದೂರು ಸಲ್ಲಿಸಿರುವ ಹಿನ್ನೆಲೆಯಲ್ಲಿ ಶಿಸ್ತು ಕ್ರಮ.
7.	ಇಸಿಇ/05/ಹೊಪಸೇ/ಡಿಎಸ್‌ಸಿ(2)/ 2015	1. **ಶ್ರೀ ಸಿ.ಎನ್ ಜನಾಯಿ, ಅಂದಿನ ಅಬಕಾರಿ ನಿರೀಕ್ಷಕರು, ಹಾಲಿ ಅಬಕಾರಿ ಉಪ ಅಧೀಕ್ಷಕರು.** ಗ್ರೂಪ್ ಸಿ ಸಿಬ್ಬಂದಿ.	ಅಬಕಾರಿ ಉಪ ಆಯುಕ್ತರ ಕಛೇರಿ, ಗದಗ ಜಿಲ್ಲೆ ಇಲ್ಲಿ ಲೋಕಾಯುಕ್ತ ದಾಳಿ ನಡೆಸಿ, ಕಛೇರಿಯಲ್ಲಿ ನಗದು ಘೋಷಣಾ ವಹಿ ನಮೂದು ಮಾಡದಿರುವ ಕುರಿತು-
8.	ಇಸಿಇ/05/ಡಿಎಸ್‌ಸಿ(2)/ ಹೊಸಪೇಟೆ ವಿಭಾಗ/2019	ಶ್ರೀ ಡಿ. ದೇವಣ್ಣ, ಅಬಕಾರಿ ಉಪ ಅಧೀಕ್ಷಕರು, ಕೊಪ್ಪಳ	ಮಂಡನಾಧಿಕಾರಿಯಾಗಿ ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇರುವ ಬಗ್ಗೆ.
9.	ಇಸಿಇ/06/ಡಿಎಸ್‌ಸಿ(3)/ ಮಂ.ವಿ./2017	ಶ್ರೀ ಅರುಣ್ ಕುಮಾರ್, ಅಂದಿನ ಅಬಕಾರಿ ಉಪ ಆಯುಕ್ತರು, ದಕ್ಷಿಣ ಕನ್ನಡ ಜಿಲ್ಲೆ	ನೀಲಿ ನಕಾಶೆ ವಿತರಿಸದೇ ಕರ್ತವ್ಯಲೋಪವೆಸಗಿರುವ ಬಗ್ಗೆ ಶಿಸ್ತು ಕ್ರಮ. ಲೋಕಾಯುಕ್ತರ ಪ್ರಕರಣ-

10.	ಇಸಿಇ/02/ಡಿಎಸ್‌ಸಿ(3)/ಕಲಬುರಗಿ ವಿಭಾಗ/2018	ಶ್ರೀ ಕೆ ವಿನೋದ್ ಕುಮಾರ್, ಅಂದಿನ ಅಬಕಾರಿ ಅಧೀಕ್ಷಕರು, ಉಡುಪಿ ವಿಭಾಗ, ಉಡುಪಿ ಜಿಲ್ಲೆ.	ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಬಗ್ಗೆ ಲೋಕಾಯುಕ್ತ ಪ್ರಕರಣ ದಾಖಲಾದ ಬಗ್ಗೆ.
11.	ಇಸಿಇ/15/ಡಿಎಸ್‌ಸಿ(3)/02/ಎಂಎಲ್ ಆರ್/ 2016	ಶ್ರೀ ಅಮರನಾಥ ಎಸ್.ಎಸ್. ಭಂಡಾರಿ, ಅಬಕಾರಿ ಉಪ ಅಧೀಕ್ಷಕರು, ಮಂಗಳೂರು ಉಪ ವಿಭಾಗ-1	ಜಾರಿ ಮತ್ತು ತನಿಖೆ ಕರ್ತವ್ಯ ಲೋಪದ ಬಗ್ಗೆ, ಶಿಸ್ತು ಕ್ರಮ ಇಲಾಖಾ ವಿಚಾರಣೆಗೆ ಆದೇಶಿಸುವ ಬಗ್ಗೆ.
12.	ಇಸಿಇ/07/ಡಿಎಸ್‌ಸಿ(3)/ ಕಲಬುರಗಿ ವಿಭಾಗ/2018	ಶ್ರೀ ಹೆಚ್.ಎಂ. ಬಸವರಾಜ, ಅಬಕಾರಿ ಉಪ ಅಧೀಕ್ಷಕರು, ಕಲಬುರಗಿ ಉಪ ವಿಭಾಗ, ಕಲಬುರಗಿ ಜಿಲ್ಲೆ.	ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾದ ಬಗ್ಗೆ ಶಿಸ್ತು ಕ್ರಮ-
13.	ಇಸಿಇ/13/ಡಿಎಸ್‌ಸಿ(3)/ ಕಲಬುರಗಿ ವಿಭಾಗ/2018	ಶ್ರೀ ಸಂಜಯಕುಮಾರ್ ಗ್ಲ್ಯಾಡ್‌ಸನ್ ಅಬಕಾರಿ ಉಪ ಅಧೀಕ್ಷಕರು, ಚಿತ್ತಾಪುರ ಉಪ ವಿಭಾಗ	ವರ್ಗಾವಣೆ ಆದೇಶವನ್ನು ಮೀರಿ ವರ್ಗಾಯಿಸಿದ ಸ್ಥಳಕ್ಕೆ ಹಾಜರಾಗದೆ ಕರ್ತವ್ಯ ಲೋಪ ಎಸಗಿರುವ ಬಗ್ಗೆ-
14.	ಇಸಿಇ/14/ಡಿಎಸ್‌ಸಿ(3)/ಬೆಳಗಾವಿ ವಿಭಾಗ/2015	ಶ್ರೀ ಜಗದೀಶ್ ಇನಾಂದಾರ್ ಅಬಕಾರಿ ಉಪ ಅಧೀಕ್ಷಕರು ವಿಜಯಪುರ ಉಪ ವಿಭಾಗ	ಮೆ: ರಿಕೋ ವೈನರಿ ಪ್ರೈ. ಲಿ., ವಿಜಯಪುರ ಜಿಲ್ಲೆ ಘಟಕದಲ್ಲಿ ಕಂಡು ಬಂದ ನ್ಯೂನತೆಗಳಿಗೆ ಸಂಬಂಧಪಟ್ಟಂತೆ-
15.	ಇಸಿಇ/04/ಡಿಎಸ್‌ಸಿ(3)/ಬೆಳಗಾವಿ ವಿಭಾಗ/2018	ಶ್ರೀ ಹೆಚ್.ಎಸ್. ಶಿವಪ್ಪ, ಅಬಕಾರಿ ಉಪ ಅಧೀಕ್ಷಕರು ರಾಯಚೂರು ಉಪ ವಿಭಾಗ, ರಾಯಚೂರು ಜಿಲ್ಲೆ	ಬಿ.ಕೆ ಪವಿತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ, ಅಬಕಾರಿ ಉಪ ಅಧೀಕ್ಷಕರ ಹುದ್ದೆಯಿಂದ ಅಬಕಾರಿ ನಿರೀಕ್ಷಕರ ಹುದ್ದೆಗೆ ಹಿಂಬಡ್ತಿಗೊಳಿಸಿದ ಆದೇಶದಂತೆ ಕರ್ತವ್ಯಕ್ಕೆ ಹಾಜರಾಗದಿರುವ ಕುರಿತು-
16.	ಇಸಿಇ/07/ಡಿಎಸ್‌ಸಿ(3)/ಬೆಳಗಾವಿ ವಿಭಾಗ/2019	ಶ್ರೀ ಮಂಜುನಾಥ ವಿ. ಅರೆಗುಳಿ, ಅಬಕಾರಿ ಉಪ ಅಧೀಕ್ಷಕರು, ಹಾವೇರಿ ಉಪ ವಿಭಾಗ, ಹಾವೇರಿ.	ಜಾರಿ ಮತ್ತು ತನಿಖೆ ಕರ್ತವ್ಯ ಲೋಪದ ಬಗ್ಗೆ ಶಿಸ್ತು ಕ್ರಮ ಇಲಾಖಾ ವಿಚಾರಣೆಗೆ ಆದೇಶಿಸುವ ಬಗ್ಗೆ.
17.	ಇಸಿಇ/ಬಿಎನ್‌ಜಿ/01(ಎ)/ಡಿಎಸ್‌ಸಿ (01)/2012	1. ಶ್ರೀ ಎಸ್. ಚಂದ್ರು, ನಿವೃತ್ತ ಅಬಕಾರಿ ಅಧೀಕ್ಷಕರು	ಅಬಕಾರಿ ಉಪ ಅಧೀಕ್ಷಕರ ಕಛೇರಿ, ಚಿಂತಾಮಣಿ ಉಪ ವಿಭಾಗ, ಇಲ್ಲಿನ ಸಿಬ್ಬಂದಿಯು ಖಜಾನೆಯಿಂದ ಹೆಚ್ಚುವರಿಯಾಗಿ ಹಣ ತೆಗೆದು ಸರ್ಕಾರಕ್ಕೆ

		2. ಶ್ರೀ ಮಹೇಶ್ ಕುಮಾರ್. ಅಬಕಾರಿ ಉಪ ಆಯುಕ್ತರು, ರಾಮನಗರ ಜಿಲ್ಲೆ	ವಂಚನೆ ಎಸಗಿರುವ ಅಧಿಕಾರಿ / ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು.
18.	ಇಸಿಇ/ಬಿಎನ್‌ಜಿ/08/ಡಿಎಸ್‌ಸಿ(1) /2014	ಶ್ರೀ ಹೆಚ್. ಎಸ್. ಶಿವಪ್ಪ, ಅಂದಿನ ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ತುಮಕೂರು ಜಿಲ್ಲೆ	ಶ್ರೀ ಹೆಚ್. ಎಸ್. ಶಿವಪ್ಪ, ಅ.ಉ. ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ತುಮಕೂರು ಜಿಲ್ಲೆ ಇವರ ವಿರುದ್ಧ ದುರ್ನಡತೆ ಹಾಗೂ ಕರ್ತವ್ಯ ನಿರ್ಲಕ್ಷತೆ ಹಿನ್ನಲೆಯಲ್ಲಿ ಶಿಸ್ತು ಕ್ರಮ ಜರುಗಿಸುವ ಕುರಿತು.
19.	ಇಸಿಇ/ಬಿಎನ್‌ಜಿ/19/ಡಿಎಸ್‌ಸಿ(1) /2014	1. ಶ್ರೀ ಜಗದೀಶ್ ನಾಯಕ್, ಅಂದಿನ ಅಬಕಾರಿ ಉಪ ಆಯುಕ್ತರು 2. ಶ್ರೀ ಯೋಗಾನಂದ್, ಅಬಕಾರಿ ಉಪ ಅಧೀಕ್ಷಕರು, 3. ಶ್ರೀ ವೈ ಭರತೇಶ್, ಅಬಕಾರಿ ಅಧೀಕ್ಷಕರು 4. ಶ್ರೀ ಸುರೇಶ ಅಬಕಾರಿ ಉಪ ಅಧೀಕ್ಷಕರು 5. ಶ್ರೀ ಗೋಪಾಲಕೃಷ್ಣಗೌಡ, ಅಬಕಾರಿ ಉಪ ಆಯುಕ್ತರು ಮತ್ತು ಗ್ರೂಪ್-ಸಿ ವೃಂದದ ನೌಕರರುಗಳು ವಿರುದ್ಧ ಜಂಟಿ ಪ್ರಕರಣ	ಶ್ರೀ.ವೈ.ವೆಂಕಟೇಶ್, ಇವರಿಗೆ ನಂ: 256/ಎ/1, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಹೊಸರು, ಮುಖ್ಯರಸ್ತೆ, ಆನೇಕಲ್ ತಾಲ್ಲೂಕು ಬೆಂಗಳೂರು ಇಲ್ಲಿಗೆ ನಿಯಮ ಬಾಹಿರವಾಗಿ 2002-03 ನೇ ಸಾಲಿಗೆ ಸಿಎಲ್-7 ಸನ್ನದನ್ನು ಮಂಜೂರು ಮಾಡಲು ಹಾಗೂ 2013-14 ನೇ ಸಾಲಿನವರೆಗೆ ನವೀಕರಿಸಲು ಶಿಫಾರಸ್ಸು ಮಾಡಿದ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು.
20.	ಇಸಿಇ/ಬಿಎನ್‌ಜಿ/12/ಡಿಎಸ್‌ಸಿ(1) /2015	1. ಶ್ರೀಮತಿ ವೀಣಾ, ಅಂಧಿನ ಅಬಕಾರಿ ಉಪ ಆಯುಕ್ತರು 2. ಶ್ರೀ ಎಸ್. ಚಂದ್ರು, ನಿವೃತ್ತ ಅಬಕಾರಿ ಅಧೀಕ್ಷಕರು 3. ಶ್ರೀ ಗೋಪಾಲಕೃಷ್ಣಗೌಡ ಪಿ., ಅಬಕಾರಿ ಉಪ ಆಯುಕ್ತರು, ಹಾಸನ ಜಿಲ್ಲೆ ಮತ್ತು ಗ್ರೂಪ್-ಸಿ ವೃಂದದ ನೌಕರರುಗಳು ವಿರುದ್ಧ	ಮೆ:: ಜಾನ್ ವೈನರೀಸ್ ಪ್ರೈ.ಲಿ., ಪಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು ಇಲ್ಲಿನ ನ್ಯೂನ್ಯತೆಗಳ ಹಿನ್ನೆಲೆಯಲ್ಲಿ, ಅಬಕಾರಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿ / ನೌಕರರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು.

		ಜಂಟಿ ಪ್ರಕರಣ.	
21.	ಇಸಿಇ/14/ಸಿಆರ್‌ಎಂ/ಬೆಂ.ನ(ಪೂ) /2016	1. ಶ್ರೀ ಜೆ. ಗಿರಿ, ಅಬಕಾರಿ ಉಪ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ (ದಕ್ಷಿಣ), 2. ಶ್ರೀಮತಿ ಶೈಲಜಾ ಎ ಕೋಟೆ, ಅಬಕಾರಿ ಉಪ ಆಯುಕ್ತರು, ದಕ್ಷಿಣ ಕನ್ನಡ ಜಿಲ್ಲೆ 3. ಶ್ರೀ ಪಿ ಚಂದ್ರ ಅಬಕಾರಿ ಉಪ ಅಧೀಕ್ಷಕರು, ನೆಲ ಮಂಗಲ ವಿಭಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಗ್ರೂಪ್-ಸಿ ವೃಂದದ ನೌಕರರುಗಳು ವಿರುದ್ಧ ಜಂಟಿ ಪ್ರಕರಣ.	ಬೆಂಗಳೂರು ನಗರ (ಪೂರ್ವ) ಜಿಲ್ಲೆಯ ರಾಜಮಹಲ್ ವಲಯ ವ್ಯಾಪ್ತಿಯ ಸಹಕಾರ ನಗರದಲ್ಲಿರುವ ಮೆ: ನೇಸರ ಗ್ಯಾಂಡ್ ಬಾರ್ ಮತ್ತು ರೆಸ್ಟೋರೆಂಟ್ ಎಂಬ ಹೆಸರಿನ ಸಿಎಲ್-9 ಸನ್ನದು ಎರಡೂ ವಲಯ ವ್ಯಾಪ್ತಿಗಳಲ್ಲಿ ಕಾರ್ಯನಿರ್ವಹಿಸಲು ಕಾರಣರಾದ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮದ ಕುರಿತು.
22.	ಇಸಿಇ/43/. /ಆರ್‌ಎನ್‌ಆರ್/ ಸಿಆರ್‌ಎಂ/2016-17	1. ಶ್ರೀಮತಿ ರೂಪಶ್ರೀ ಕೆ., ಅಂದಿನ ಅಬಕಾರಿ ಉಪ ಆಯುಕ್ತರು, ರಾಮನಗರ ಜಿಲ್ಲೆ 2. ಶ್ರೀ ಶಿವಹರಳಯ್ಯ, ಅಬಕಾರಿ ಉಪ ಅಧೀಕ್ಷಕರು, ಚಿತ್ರದುರ್ಗ ಉಪ ವಿಭಾಗ, ಮತ್ತು ಗ್ರೂಪ್-ಸಿ ವೃಂದದ ನೌಕರರುಗಳು ವಿರುದ್ಧ ಜಂಟಿ ಪ್ರಕರಣ.	ಮೆ: ಎಸ್.ಪಿ.ಆರ್ ಡಿಸ್ಟಿಲರಿಯಲ್ಲಿನ ಮದ್ಯಸಾರ ಸೋರಿಕೆಗೆ ಕಾರಣರಾದ ಕಾರಣರಾದ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮದ ಕುರಿತು.
23.	ಇಸಿಇ/02/ಬಿಎನ್‌ಜಿ/ಡಿಎಸ್‌ಸಿ(1) /2018	ಶ್ರೀ ಟಿ. ಎಂ. ಶ್ರೀನಿವಾಸ್, ಅಂದಿನ ಅಬಕಾರಿ ಉಪ ಅಧೀಕ್ಷಕರು, ಕೋರಮಂಗಲ ಉಪ ವಿಭಾಗ ಹಾಲಿ ಅಬಕಾರಿ ಅಧೀಕ್ಷಕರು ಮೆ: ಯುನೈಟೆಡ್ ಸ್ಪಿರಿಟ್ಸ್,	ಶ್ರೀ ಟಿ. ಎಂ. ಶ್ರೀನಿವಾಸ್, ಅಬಕಾರಿ ಉಪ ಅಧೀಕ್ಷಕರು, ಕೋರಮಂಗಲ ಉಪ ವಿಭಾಗ, ಬೆಂಗಳೂರು ನಗರ ಜಿಲ್ಲೆ (ದಕ್ಷಿಣ) ಇವರ ಕರ್ತವ್ಯ ಲೋಪದ ಸಂಬಂಧ ಶಿಸ್ತು ಕ್ರಮ ಜರುಗಿಸುವ ಕುರಿತು.

		ಕುಂಬಳಗೋಡು, ಬೆಂಗಳೂರು.	
24.	ಇಸಿಇ/03/ಬಿಎನ್‌ಜಿ/ಡಿಎಸ್‌ಸಿ(1)/2018	ಶ್ರೀ ಎಸ್.ಎಂ. ಶಿವಹರಳಯ್ಯ, ಅಂದಿನ ಅಬಕಾರಿ ಉಪ ಅಧೀಕ್ಷಕರು, ರಾಮನಗರ ಉಪ ವಿಭಾಗ, ರಾಮನಗರ ಜಿಲ್ಲೆ ಹಾಲಿ ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಜಿಲ್ಲೆ.	ಶ್ರೀ ಎಸ್.ಎಂ. ಶಿವಹರಳಯ್ಯ, ಅಬಕಾರಿ ಉಪ ಅಧೀಕ್ಷಕರು, ರಾಮನಗರ ಉಪ ವಿಭಾಗ, ರಾಮನಗರ ಜಿಲ್ಲೆ ಇವರ ಕರ್ತವ್ಯ ಲೋಪದ ಸಂಬಂಧ ಶಿಸ್ತು ಕ್ರಮ ಜರುಗಿಸುವ ಕುರಿತು.
25.	ಇಸಿಇ/17/ಬಿಎನ್‌ಜಿ/ಡಿಎಸ್‌ಸಿ(1)/2018	1. ಶ್ರೀ ಜಗದೀಶ್ ನಾಯ್ಕ್, ಅಂದಿನ ಅಬಕಾರಿ ಉಪ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ (ದಕ್ಷಿಣ) 2. ರಘುನಾಥ್ ವಿ, ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಗ್ರೂಪ್-ಸಿ ವೃಂದದ ನೌಕರರುಗಳು ವಿರುದ್ಧ ಜಂಟಿ ಪ್ರಕರಣ	ಆನೇಕಲ್ ವಲಯ, ಬೆಂಗಳೂರು(ದಕ್ಷಿಣ) ಇಲ್ಲಿ ಆರ್.ಕೆ. ಗ್ರೀನ್ ಫ್ಯಾಮಿಲಿ ರೆಸ್ಟೋರೆಂಟ್ ನಂ.761/116 ಎಡವನಹಳ್ಳಿ, ಹೊಸೂರು ರಸ್ತೆ, ಬೆಂಗಳೂರು ಇಲ್ಲಿನ ಅಬಕಾರಿ ಅಕ್ರಮಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ.
26.	ಇಸಿಇ/01/ಬಿಎನ್‌ಜಿ/ಡಿಎಸ್‌ಸಿ(1)/2019	1. ಶ್ರೀ ಜಗದೀಶ್ ನಾಯ್ಕ್, ಅಂದಿನ ಅಬಕಾರಿ ಉಪ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ (ದಕ್ಷಿಣ) 2. ಶ್ರೀ ವಿನೋದ್ ಡಂಗೆ ಅಬಕಾರಿ ಉಪ ಅಧೀಕ್ಷಕರು, ಕೋರಮಂಗಲ ಉಪ ವಿಭಾಗ, ಬೆಂಗಳೂರು ನಗರ ಜಿಲ್ಲೆ (ದಕ್ಷಿಣ) ಹಾಗೂ ಗ್ರೂಪ್-ಸಿ ವೃಂದದ ನೌಕರರು.	100 ಮೀ ಅಂತರದೊಳಗೆ ಜಯನಗರ ಬಡಾವಣೆಯಲ್ಲಿ ಲಕ್ಕರ್ ಡಿ-ಮಾರ್ಟ್ ಎಂಬ ಮದ್ಯದಂಗಡಿಯನ್ನು ತೆರೆಯಲು ಪರವಾನಿಗೆಯನ್ನು ನಿಯಮ ಬಾಹಿರವಾಗಿ ನೀಡಿದ್ದ ಅಧಿಕಾರಿಗಳ ವಿರುದ್ಧ ಶಿಸ್ತ ಕ್ರಮ

27.	ಇಸಿಇ/04/ಬಿಎನ್‌ಜಿ/ಡಿಎಸ್‌ಸಿ(1)/ 2019	1. ಯೋಗಾನಂದ್.ಟಿ.ಬಿ ಅಬಕಾರಿ ಉಪ ಅಧೀಕ್ಷಕರು ಅಬಕಾರಿ ಆಯುಕ್ತರ ಕಛೇರಿ. ಬೆಂಗಳೂರು ಹಾಗೂ ಗ್ರೂಪ್-ಸಿ ವೃಂದದ ನೌಕರರು.	ಶ್ರೀ ಬಸವರಾಜ ಮೆಣಸಿನಕಾಯಿ, ನಿವೃತ್ತ ಕಛೇರಿ ಅಧೀಕ್ಷಕರು, ಇವರ ವಿರುದ್ಧ ಶಿಸ್ತು ಕ್ರಮ ಬಾಕಿ ಇದ್ದರೂ ಸಹ ಪಿಂಚಣಿಯನ್ನು ಮಂಜೂರು ಮಾಡಿರುವವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ.
28.	ಇಸಿಇ/ಬಿಎನ್‌ಜಿ/04/ಡಿಎಸ್‌ಸಿ(1)/ 2015	ಶ್ರೀ ವಿ. ಚಂದ್ರಪ್ಪ, ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಚಿತ್ರದುರ್ಗ ಜಿಲ್ಲೆ.	ಶ್ರೀ ವಿ. ಚಂದ್ರಪ್ಪ, ಅಬಕಾರಿ ಉಪ ಅಧೀಕ್ಷಕರು, ಕೆ.ಜಿ.ಎಫ್. ಉಪ ವಿಭಾಗ, ಕೋಲಾರ ಜಿಲ್ಲೆ, ಇವರ ವಿರುದ್ಧದ ಲೋಕಾಯುಕ್ತ ಪ್ರಕರಣದ ಕುರಿತು.
29.	ಎಕ್ಸೈಜ್-17011/10/2016	ಶ್ರೀ ವೈ. ಭರತೇಶ್ ಅಂದಿನ ಅಬಕಾರಿ ಉಪ ಅಧೀಕ್ಷಕರು, ರಾಜ್ಯ ವಿಚಕ್ಷಣ ದಳ, ಬೆಂಗಳೂರು ಹಾಲಿ ಅಬಕಾರಿ ಅಧೀಕ್ಷಕರು, ಮೆ: ಎಂಸಿಎ, ಬೆಂಗಳೂರು.	ಶ್ರೀ ವೈ. ಭರತೇಶ್ ಅ.ಉ.ಅ ರಾಜ್ಯ ವಿಚಕ್ಷಣ ದಳ ಬೆಂಗಳೂರು ಇವರ ವಿರುದ್ಧದ ಲೋಕಾಯುಕ್ತ ಪ್ರಕರಣದ ಬಗ್ಗೆ.
30	ಇಸಿಇ/03/ಬಿಎನ್‌ಜಿ/ಡಿಎಸ್‌ಸಿ(1) /2017	ಶ್ರೀ ವಿಜಯ್‌ಕುಮಾರ್ ದಾಮಾ. ಅಬಕಾರಿ ಉಪ ಅಧೀಕ್ಷಕರು ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು.	ಶ್ರೀ ವಿಜಯ್‌ಕುಮಾರ್ ದಾಮಾ, ಅಂದಿನ ಅಬಕಾರಿ ನಿರೀಕ್ಷಕರು, ಯಶವಂತಪುರ ವಲಯ ಹಾಲಿ ಅಬಕಾರಿ ಉಪ ಅಧೀಕ್ಷಕರು, ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸುವ ಬಗ್ಗೆ.
31	ಇಸಿಇ/01/ಬಿಎನ್‌ಜಿ/ಡಿಎಸ್‌ಸಿ(1)/ 2018	ಶ್ರೀ ವಿವೇಕ್ ಜಿ., ಅಬಕಾರಿ ಉಪ ಅಧೀಕ್ಷಕರು ಯಶವಂತಪುರ ಉಪ ವಿಭಾಗ ಬೆಂಗಳೂರು	ಶ್ರೀ ವಿವೇಕ್ ಜಿ., ಅಬಕಾರಿ ಉಪ ಅಧೀಕ್ಷಕರು, ಇವರ ವಿರುದ್ಧ ಲೋಕಾಯುಕ್ತರಲ್ಲಿ ದಾಖಲಾಗಿರುವ ದೂರಿನ ಕುರಿತು ವಿಚಾರಣೆ ನಡೆಸಲು ಪ್ರಕರಣವನ್ನು ಸನ್ಮಾನ್ಯ ಉಪ ಲೋಕಾಯುಕ್ತ ರವರಿಗೆ ವಹಿಸುವ ಬಗ್ಗೆ. ಸರ್ಕಾರದ ಆದೇಶ ಸಂ.ಅಇ/141/ಇಪಿಎಸ್/2017. ದಿ:5/3/2021 ರಲ್ಲಿ ಶ್ರೀ.ವಿವೇಕ್ .ಜಿ. ಅಬಕಾರಿ ಉಪ ಅಧೀಕ್ಷಕರು ಇವರ 14-ಎ ರಡಿ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲಾದ ಇಲಾಖಾ ವಿಚಾರಣೆಯನ್ನು ಸರ್ಕಾರವು ರದ್ದುಗೊಳಿಸಿ ಆದೇಶಿಸಿರುತ್ತದೆ.

32	ಇಸಿಇ/11/ಡಿಎಸ್‌ಸಿ(2)/ಹೊಸಪೇಟೆ ವಿಭಾಗ/2017.	ಶ್ರೀ ಸಿ.ಎನ್. ಜನಾಯಿ, ಅಂದಿನ ಅಬಕಾರಿ ಉಪ ಅಧೀಕ್ಷಕರು, ಗದಗ ಉಪ ವಿಭಾಗ.	ಗದಗ ಜಿಲ್ಲೆಯಲ್ಲಿ ಭಾ.ತ.ಮ ಗುರಿ ಸಾಧನೆ ಮತ್ತು ಜಾರಿ ಮತ್ತು ತನಿಖಾ ಕಾರ್ಯ ಗಳನ್ನು ಸಮರ್ಪಕವಾಗಿ ನಿರ್ವಹಿಸಲು ವಿಫಲರಾಗಿರುವ ಸಂಬಂಧ ಶಿಸ್ತು ಕ್ರಮ
33	ಇಸಿಇ/01/ಡಿಎಸ್‌ಸಿ (2)/ ಮಂಗಳೂರು ವಿಭಾಗ/2020.	ಶ್ರೀ ಹೆಚ್.ಎಸ್ ಶಿವಪ್ಪ ಅಬಕಾರಿ ಉಪ ಅಧೀಕ್ಷಕರು ಸೋಮವಾರಪೇಟೆ ಉಪ ವಿಭಾಗ. ಹಾಗೂ ಗ್ರೂಪ್–ಸಿ ವೃಂದದ ನೌಕರರು.	ಸಾರ್ವಜನಿಕವಾಗಿ ಪರಸ್ಪರ ಹಲ್ಲೆ ಮಾಡಿಕೊಂಡಿರುವ ಸಂಬಂಧ ಸದರಿಯವರಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸುವ ಸಂಬಂಧ
34	ಸಂಖ್ಯೆ:ಇಸಿಇ/35/ಡಿಎಸ್ಸಿ(3)/ ಕಲಬುರಗಿ ವಿಭಾಗ/2017.	ಶ್ರೀಮತಿ ಇಂದೂಬಾಯಿ, ಅಂದಿನ ಕಛೇರಿ ಅಧೀಕ್ಷಕರು ಹಾಗೂ ಪ್ರಸ್ತುತ ಅಬಕಾರಿ ಅಧೀಕ್ಷಕರು M/s:HERMES Distillery, Yadrawil Village, Raibag Taluk,Belagavi Dist.,(North) ಬೆಳಗಾವಿ (ಉತ್ತರ) ಶ್ರೀ ಸೈಯದ್ ನಜೀರುದ್ದೀನ್, ದ್ವಿತೀಯ ದರ್ಜೆ ಸಹಾಯಕರು, ಅಬಕಾರಿ ಉಪ ಆಯುಕ್ತರ ಕಛೇರಿ, ಕಲಬುರಗಿ ಜಿಲ್ಲೆ	ಅಬಕಾರಿ ನಿರೀಕ್ಷಕರ ಕಛೇರಿ, ಆಳಂದ ವಲಯ, ಇವರ ಕಛೇರಿಯ ವಾಹನ ಸಂಖ್ಯೆ: ಕೆಎ-32-ಜಿ-479 ನಿಗಧಿತ ಅವಧಿಯಲ್ಲಿ ವಿಮಾ ಪಾಲಿಸಿ ನವೀಕರಣಗೊಳಿಸದೆ ಇರುವುದು. ವಾಹನವು ಮಹಾರಾಷ್ಟ್ರದಲ್ಲಿ ಅಪಘಾತಗೊಂಡಿರುವ ಬಗ್ಗೆ -

ಅನುಬಂಧ-4

ಕ್ರ.ಸಂ	ಕಡತ ಸಂ.	ಅಧಿಕಾರಿ ಹೆಸರು / ವಿಷಯ	ದಂಡನಾದೇಶ
1)	ಇಸಿಇ/01/ಹೊಸಪೇ/ ಡಿಎಸ್‌ಸಿ(3)/2012	ಶ್ರೀಮತಿ ಪಿ. ಬಿಂದುಶ್ರೀ, ಅಂದಿನ ಅಬಕಾರಿ ಉಪ ಅಧೀಕ್ಷಕರು, ಚಿತ್ರದುರ್ಗ ಉಪ ವಿಭಾಗ,	ಹೊಸಪೇಟೆ ವಿಭಾಗದಲ್ಲಿ ದಾಖಲಾದ ಮೊಕದ್ದಮೆಗಳ ಅಸಮರ್ಪಕ ನಿರ್ವಹಣೆಗೆ ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಸರ್ಕಾರದ ಆದೇಶ ಸಂಖ್ಯೆ: ಆಇ/14/ಇಪಿಎಸ್/2017, ದಿನಾಂಕ: 31.10.2018 ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(ii) ರನ್ವಯ ವಾಗ್ದಂಡನೆಯನ್ನು ವಿಧಿಸಿ ಆದೇಶಿಸಿರುತ್ತದೆ.
2)	ಇಸಿಇ/07/ಹೊಸಪೇ/ಡಿಎಸ್‌ಸಿ (3)/2010	ಶ್ರೀಮತಿ ಪಿ. ಬಿಂದುಶ್ರೀ, ಅಂದಿನ ಅಬಕಾರಿ ಉಪ ಅಧೀಕ್ಷಕರು, ಚಿತ್ರದುರ್ಗ ಉಪ ವಿಭಾಗ,	ಹೊಸಪೇಟೆ ವಿಭಾಗದಲ್ಲಿ ದಾಖಲಾದ ಮೊಕದ್ದಮೆಗಳ ಅಸಮರ್ಪಕ ನಿರ್ವಹಣೆಗೆ ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಸರ್ಕಾರದ ಆದೇಶ ಸಂಖ್ಯೆ: ಆಇ/13/ಇಪಿಎಸ್/2017, ದಿನಾಂಕ: 31.10.2018 ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(ii) ರನ್ವಯ ವಾಗ್ದಂಡನೆಯನ್ನು ವಿಧಿಸಿ ಆದೇಶಿಸಿರುತ್ತದೆ.
3)	ಇಸಿಇ/02/ಎಂವೈಎಸ್/ಡಿಎಸ್‌ಸಿ (2)/ 2015	ಶ್ರೀ ಗಂಗಾಧರ್ ಹೆಚ್. ಮುದಣ್ಣನವರ್, ಅಬಕಾರಿ ಉಪ ಅಧೀಕ್ಷಕರು, ಹುಣಸೂರು ಉಪ ವಿಭಾಗ, ಮೈಸೂರು ಜಿಲ್ಲೆ	ನಿಯಮಬಾಹಿರವಾಗಿ ಸಿ.ಎಲ್-7 ಸನ್ನದು ಮಂಜೂರು ಮಾಡಲು ಶಿಫಾರಸ್ಸು ಮಾಡಿರುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಆಇ/01/ಇಪಿಎಸ್/2019, ದಿನಾಂಕ: 21.08.2019 ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(iii) ರನ್ವಯ 05 ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ ತಡೆ ಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿರುತ್ತದೆ.
4)	ಇಸಿಇ/08/ಡಿಎಸ್‌ಸಿ(3)/ ಗುಲಬರ್ಗಾ ವಿಭಾಗ/2013	ಶ್ರೀ ಎಸ್.ಕೆ ಕುಮಾರ್, ಅಂದಿನ ಅಬಕಾರಿ ಉಪ ಆಯುಕ್ತರು, ಯಾದಗಿರಿ ಜಿಲ್ಲೆ ಹಾಲಿ ಅಬಕಾರಿ ಜಂಟಿ ಆಯುಕ್ತರು, ಕಲಬುರಗಿ ವಿಭಾಗ	ನಿಯಮ ಬಾಹಿರವಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು 2013-14ನೇ ಸಾಲಿಗೆ ಸನ್ನದನ್ನು ನವೀಕರಿಸಿರುವ ಬಗ್ಗೆ- ಸರ್ಕಾರದ ಆದೇಶ ಸಂಖ್ಯೆ: ಆಇ/139/ಇಪಿಎಸ್ /2013, ದಿನಾಂಕ: 15.06.2019 ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(iv-a) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ದಿನಾಂಕ: 30.12.2021ರ ವರೆಗೆ ಅಬಕಾರಿ ಜಂಟಿ ಆಯುಕ್ತರು ವೃಂದದ ವೇತನ

			ಶ್ರೇಣಿ ರೂ. 82,000-1,17,700 ರ ಕನಿಷ್ಠ ವೇತನಕ್ಕೆ ನಿಗದಿಗೊಳಿಸುವ ಮತ್ತು ಈ ಅವಧಿಯಲ್ಲಿ ಯಾವುದೇ ವೇತನ ಬಡ್ತಿಯನ್ನು ಹೊಂದಲು ಅವಕಾಶವಿಲ್ಲದ ದಂಡನೆಯನ್ನು ವಿಧಿಸಿ ಆದೇಶಿಸಿರುತ್ತದೆ.
5)	ಇಸಿಇ/74/ದೂರು/2013-14/ಡಿಎಸ್‌ಸಿ(1)	ಶ್ರೀ ವಿ. ಚಂದ್ರಪ್ಪ, ಅಂದಿನ ಅಬಕಾರಿ ಉಪ ಅಧೀಕ್ಷಕರು, ಕೆ.ಜಿ.ಎಫ್ ಉಪ ವಿಭಾಗ, ಕೋಲಾರ ಜಿಲ್ಲೆ	ಅಬಕಾರಿ ಆಯುಕ್ತರ ಆದೇಶ ಸಂಖ್ಯೆ: ಇಸಿಇ/74/ದೂರು/2013-14/ಡಿಎಸ್‌ಸಿ(1), ದಿನಾಂಕ: 06.12.2019 ರಲ್ಲಿ ಶ್ರೀ ವಿ. ಚಂದ್ರಪ್ಪ, ಅಂದಿನ ಅಬಕಾರಿ ಉಪ ಅಧೀಕ್ಷಕು, ಕೆ.ಜಿ.ಎಫ್ ಉಪ ವಿಭಾಗ ಇವರ ಮೇಲಿನ ಆರೋಪಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(iii) ರನ್ವಯ ಮುಂದಿನ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತ ತಡೆ ಹಿಡಿದು ದಂಡನೆಯನ್ನು ವಿಧಿಸಿ ಆದೇಶಿಸಿರುತ್ತದೆ.
6)	ಇಸಿಇ/05/ಹೊಸಪೇ/ಡಿಎಸ್‌ಸಿ(2)/ 2014	1. ಶ್ರೀ ಬಿ.ವಿ.ಹೂವಪ್ಪ ಗೌಡ ಅಬಕಾರಿ ಉಪ ಆಯುಕ್ತರು (ನಿವೃತ್ತ) 2. ಶ್ರೀ ವಿಜಯ ಕುಮಾರ್, ಅಬಕಾರಿ ಉಪ ಅಧೀಕ್ಷಕರು ಹಾಸನ ಜಿಲ್ಲೆ.	ನೀಲಿ ನಕಾಶೆಗಳನ್ನು ಸನ್ನದುದಾರರಿಗೆ ನೀಡದಿರುವ ಬಗ್ಗೆ ಲೋಕಾಯುಕ್ತ ಕ್ಕೆ ಸಲ್ಲಿಸಿರುವ ದೂರು ಕುರಿತು ವಿಚಾರಣೆ. ಸರ್ಕಾರದ ಆದೇಶ ಸಂಖ್ಯೆ: ಆಇ 144 ಇಪಿಎಸ್ 2014, ದಿನಾಂಕ: 21.12.2020 ರಲ್ಲಿ ಶ್ರೀ ಬಿ.ವಿ.ಹೂವಪ್ಪ ಗೌಡ, ನಿವೃತ್ತ ಅಬಕಾರಿ ಉಪ ಆಯುಕ್ತರು, ಇವರಿಗೆ ಮಾಸಿಕ ನಿವೃತ್ತಿ ವೇತನದಲ್ಲಿ ಶೇಕಡ 25 ರಷ್ಟು ಭಾಗವನ್ನು 5 ವರ್ಷಗಳ ಅವಧಿಗೆ ತಡೆಹಿಡಿಯುವ ಬಗ್ಗೆ, ದಂಡನೆ ಹಾಗೂ ಶ್ರೀ.ವಿಜಯ ಕುಮಾರ್, ಅಉಅ ಇವರಿಗೆ 2 ವಾರ್ಷಿಕ ವೇತನ ಬಡ್ತಿಗಳನ್ನು 5 ವರ್ಷಗಳ ಅವಧಿಗೆ ಸಂಚಿತ ಪರಿಣಾಮರಹಿತವಾಗಿ ತಡೆಯಿಡಿಯುವ ಬಗ್ಗೆ, ದಂಡನೆಯನ್ನು ವಿಧಿಸಲಾಗಿರುತ್ತದೆ.
7)	ಇಸಿಇ/11/ಡಿಎಸ್ ಸಿ(2)/ಹೊಸಪೇಟೆ ವಿಭಾಗ/2017.	ಶ್ರೀ ಸಿ.ಎನ್. ಜನಾಯಿ, ಅಂದಿನ ಅಬಕಾರಿ ಉಪ ಅಧೀಕ್ಷಕರು, ಗದಗ ಉಪ ವಿಭಾಗ.	ಗದಗ ಜಿಲ್ಲೆಯಲ್ಲಿ ಭಾ.ತ.ಮ ಗುರಿ ಸಾಧನೆ ಮತ್ತು ಜಾರಿ ಮತ್ತು ತನಿಖಾ ಕಾರ್ಯ ಗಳನ್ನು ಸಮರ್ಪಕವಾಗಿ ನಿರ್ವಹಿಸಲು ವಿಫಲರಾಗಿರುವ ಸಂಬಂಧ ಶಿಸ್ತು ಕ್ರಮ ಜರುಗಿಸಲು ದಿನಾಂಕ:07.11.2017 ರಂದು ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಿದ್ದು, ಇಲಾಖಾ ವಿಚಾರಣೆಗೆ ಆದೇಶವಾಗಿರುತ್ತದೆ. ಅಂತಿಮ ವರದಿಯಲ್ಲಿ ಆರೋಪ ಸಾಬೀತಾಗಿರುವುದಿಲ್ಲವೆಂದು ವರದಿ ನೀಡಿದ್ದು, ಶಿಸ್ತು ಪ್ರಾಧಿಕಾರಿಗಳು ವಿಚಾರಣಾಧಿಕಾರಿಗಳ ವರದಿಯನ್ನು ಒಪ್ಪಿ Censure ಶಿಕ್ಷೆ ವಿಧಿಸಲಾಗಿರುತ್ತದೆ.